**CC No.1788/2021**
**CW:1**
**PW:1**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ, ಧಾರವಾಡ.**

**ಸಿಸಿ ನಂಃ 1788/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದರಾಜ್ ಕಾಮರೆಡ್ಡಿ |
| ತಂದೆಯ ಹೆಸರು | : | ಲಿಂಗರೆಡ್ಡಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯಾಪ್ಯಾರ |
| ವಾಸ ಸ್ಥಳ | : | ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 05.06.2026.**

**ಮುಖ್ಯ ವಿಚಾರಣೆ:ಮಾನ್ಯ ಹಿಸಸಅ ರವರಿಂದ**

ಈ ಪ್ರಕರಣದ ಘಟನೆಗೆ ಸಂಬಂದಿಸಿದಂತೆ ದೂರನ್ನು ನಾನೇ ನೀಡಿರುತ್ತೇನೆ. ಆರೋಪಿ-01 ರವರು ನನ್ನ ಅಕ್ಕನ ಮಗ. ಆರೋಪಿ-02 ನನ್ನ ಸಹೋದರ. ಆರೋಪಿ-03 ನನ್ನ ಅತ್ತಿಗೆ ಆಗಿರುತ್ತಾರೆ.

ನಾನು ಧಾರವಾಡ ವಿದ್ಯಾಗಿರಿಯಲ್ಲಿನ ಬಾಲಾಜಿ ಆರ್ಕೆಡ ನ ನೆಲ ಅಂತಸ್ತಿನಲ್ಲಿ ಕೃಷ್ಣಾ ಫುಡ್ ಕೋರ್ಟನ್ನು ನಡೆಸುತ್ತಿದ್ದೆ. ನಾನು 2006 ರಿಂದ ಅಲ್ಲಿ ಹೋಟೆಲ್ ವ್ಯಾಪಾರ ನಡೆಸುತ್ತಿದ್ದೆ. 2012 ರಿಂದ ಸದರಿ ಹೋಟೆಲ್ ನ ಒಂದು ಭಾಗದಲ್ಲಿ ಮಿಶ್ರಾ ಪೇಡಾ ಸ್ವೀಟ್ ಅಂಗಡಿಯನ್ನು ನಡೆಸುತ್ತಿದ್ದೆ. ಸದರಿ ಹೋಟೆಲ್ ನಡೆಸುತ್ತಿದ್ದ ಬಾಲಾಜಿ ಆರ್ಕೇಡ್ ನನ್ನ ಸಹೋದರ ಸಂಬಂಧಿ ಆದ ಜಗಧೀಶ ಕಾಮರೆಡ್ಡಿ ಮತ್ತು ನನಗೆ ಸೇರಿರುತ್ತದೆ. 2016 ರಿಂದ ಸದರಿ ಕಟ್ಟಡದಲ್ಲಿ ತಮಗೆ ಹಿಸ್ಸೆ ಇದೆ ಎಂದು ಆರೋಪಿತರು ನನಗೆ ಹೇಳುತ್ತಿದ್ದರು. ಅವರು ನನ್ನ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿ ನನ್ನವ್ಯಾಪಾರಕ್ಕೆ ಅಡ್ಡಿ ಪಡಿಸುತ್ತಿದ್ದರು. ಇದರಿಂದ ನನ್ನ

ವ್ಯಾಪಾರಕ್ಕೆ ನಷ್ಟ ಉಂಟಾಗಿರುತ್ತದೆ. ಆರೋಪಿತರು ನನ್ನ ಮೇಲೆ ದೈಹಿಕ ಹಲ್ಲೆ ಮಾಡಿ ಜೀವಬೇದರಿಕೆ ಹಾಕಿರುತ್ತಾರೆ. ಆಗ ದಿಃ31.08.2017 ರಂದು ನಾನು ಆರೋಪಿತರ ವಿರುದ್ದ ವಿದ್ಯಾಗಿರಿ ಠಾಣೆಗೆ ದೂರನ್ನು ನೀಡಿದ್ದೆ. ಸದರಿ ದೂರಿನ ಮೇರೆಗೆ ಪೋಲೀಸ್ ರು ಕ್ರಮ ಕೈ ಗೊಳ್ಳುವುದಾಗಿ ತಿಳಿಸಿದರು. ಅದರಂತೆ ಪೋಲೀಸ್ ರು ಪ್ರಕರಣವನ್ನು ಸಿ.ಆರ್.233/2017 ರಂದತೆ ದಾಖಲಿಸಿದರು.

ದಿಃ03.10.2017 ರಂದು ನಾನು ಕೆಲಸದ ನಿಮಿತ್ತ ಹೊರಗೆ ಹೋಗಿದ್ದೆ. ಆ ಸಮಯದಲ್ಲಿ ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಚಾಸಾ.04, 05 ಮತ್ತು 07 ಇದ್ದರು. ಮದ್ಯಾಹ್ನ 03.00 ಗಂಟೆಗೆ ಆರೋಪಿತರು ನನ್ನ ಅಂಗಡಿಗೆ ಬಂದು ಗಲಾಟೆ ಮಾಡಿದ್ದಾಗಿ ಚಾಸಾ.04 ರವರು ತಿಳಿಸಿದರು. ಆರೋಪಿತರು 'ಎಲ್ಲಿ ಹೋದ ಸುಳೆ ಮಗ, ಮೊದಲೇ ಒದ್ದೀದಿವಿ, ಮತ್ತೆ ಅಂಗಡಿ ತೆಗಿತೀರಾ' ಎಂದು ಅವಾಚ್ಯವಾಗಿ ಬೈದಿರುತ್ತಾರೆ. ಅಲ್ಲದೆ ನಿಮ್ಮನ್ನು ಮತ್ತು ನಿಮ್ಮ ಮಾಲೀಕರನ್ನು ಸುಟ್ಟು ಬಿಡುತ್ತೇವೆ ಎಂದು ಆರೋಪಿತರು ಚಾಸಾ.04, 05 ಮತ್ತು 07 ರವರೆಗೆ ಹೇಳಿರುತ್ತಾರೆ. ತಾವು ಅಂಗಡಿ ಬಿಟ್ಟು ಹೋಗುವುದಿಲ್ಲ, ಅಲ್ಲಿಯೆ ವ್ಯಾಪಾರ ಮಾಡುವುದಾಗಿ ಚಾಸಾ.04, 05 ಮತ್ತು 07 ರವರು ಆರೋಪಿತರಿಗೆ ಹೇಳಿದರು. ಆಗ ಆರೋಪಿತರು ಅಂಗಡಿಯ ಶೆಟರ್ ನ್ನು ಬಂದ್ ಮಾಡಲು ಪ್ರಯತ್ನಿಸಿದರು. ಚಾಸಾ.04 ರವರು ಅಂಗಡಿ ಒಳಗೆ ಇದ್ದುದ್ದರಿಂದ ಆರೋಪಿತರು ಶಟರ್ ನ್ನು ಅರ್ಧಕ್ಕೆ ಬಂದ್ ಮಾಡಿದರು. ನಿನ್ನ ಮಾಲೀಕರು ಬರಲಿ, ನಿನ್ನ ಮಾಲೀಕನನ್ನು ಅಂಗಡಿ ಒಳಗೆ ಹಾಕಿ ಶಟರ್ ಬಂದ್ ಮಾಡುವುದಾಗಿ ಆರೋಪಿತರು ದಮ್ಕಿ ಹಾಕಿದರು. ನಾನು ಕೂಡಲ ವಿದ್ಯಾಗಿರಿ ಠಾಣೆಗೆ ಹೋಗಿ ವಿಚಾರ ತಿಳಿಸಿದೆ. ಆಗ

ಠಾಣೆಯಿಂದ ಪೋಲೀಸ್ ರುಬಂದು ಆರೋಪಿತರಿಗೆ ಬುದ್ದಿ ಹೇಳಿದರು. ಆದರೂ ಮತ್ತೇ ಆರೋಪಿತರು ಸಂಜೆಸಮಯಕ್ಕೆ ಬಂದು ನನ್ನ ಅಂಗಡಿಯ ಲೈಟಗಳನ್ನು ಆರಿಸಿರುತ್ತಾರೆ. ಇದರಿಂದ ಅಂಗಡಿಗೆ ಬಂದಿದ್ದ ಗ್ರಾಹಕರನ್ನು ಹೊರಕ್ಕೆ ಕಳುಹಿಸಬೇಕಾಯಿತು.ಈ ವಿಚಾರನ್ನು ನಾನು ವಿದ್ಯಾಗಿರಿ ಠಾಣೆಗೆ ತಿಳಿಸಿದ್ದು ಸಿ.ಪಿ.ಐ ರವರು ಇಬ್ಬರು ಪೋಲೀಸ್ ರನ್ನು ನನ್ನನ್ನೊಂದಿಗೆ ಸ್ಥಳಕ್ಕೆ ಕಳುಹಿಸಿದ್ದರು. ನಂತರ ರಾತ್ರಿ 10.00 ರಿಂದ 10.30 ರ ಸಮಯದಲ್ಲಿ ನಾವು ಅಂಗಡಿಗೆ ಹೋದಾಗ ಆರೋಪಿ-01 ರವರು ' ಪೋಲೀಸ್‌ರನ್ನು ಕರೆದುಕೊಂಡು ಸುಳೆ ಮಗ, ಪೋಲೀಸ್ ರನ್ನು ಕರೆದುಕೂಂಡು ಬಂದರೆ ನಾವು ಹೇದರುತ್ತೆವೇಯೇ, ನಾನು ವಕೀಲನಿದ್ದೇನೆ, ನನ್ನನ್ನು ಯಾವುದೇ ಕೊರ್ಟ ಕಛೇರಿ ಏನು ಮಾಡಲು ಆಗುವುದಿಲ್ಲ' ಎಂದು ಹೇಳಿ ನನಗೆ ದಮ್ಕಿ ಹಾಕಿದರು. ನಾನು ಅಂಗಡಿಯ ಚಾವಿ ಹಾಕಲು ಹೋದಾಗ ಆರೋಪಿ-02 ರವರು ನನ್ನನ್ನು ದುಗಿಸಿ ಚಾವಿ ಹಾಕದಂತೆ ತಡೆದರು.ಆರೋಪಿತರು ಅವರು ತಂದಿದ್ದ ಚಾವಿಯನ್ನು ನನ್ನ ಅಂಗಡಿಗೆ ಹಾಕಿದರು. ನಂತರ ಮರುದಿನ ಠಾಣೆಗೆ ಬರುವಂತೆ ಪೋಲೀಸ್ ರುನನಗೆ ತಿಳಿಸಿ ಹೋದರು. ಅದರಂತೆ ದಿಃ04.10.2017 ರಂದು ನಾನು ಠಾಣೆಗೆ ಈಗ ನೋಡುತ್ತಿರುವ ದೂರನ್ನು ನೀಡಿರುತ್ತೇನೆ. ಸಾಕ್ಷೀ ಗುರುತಿಸಿದ ಮೇರೆಗೆ ದೂರನ್ನು **ನಿ.ಪಿ.01** ಮತ್ತು ಸಾಕ್ಷೀಯ ಸಹಿಯನ್ನು **ನಿ.ಪಿ.01(ಎ)** ಎಂದು ಗುರುತಿಸಲಾಯಿತು.

**CC No.1788/2021**
**CW:1**
**PW:1**

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಹಿಸಸಅ ಸಮಯ ಕೋರಿದ್ದು, ಮುಂದಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**